ಅ) ಕರ್ನಾಟಕ ರಾಜ್ಯ ಛತ್ರದಲ್ಲಿನ ಕೊಠಡಿಗಳು ಮತ್ತು ಕಾಟೇಜುಗಳ ವಿವರವೇನು?

ಆ) ಈ ಕೊಠಡಿಗಳು ಮತ್ತು ಕಾಟೇಜುಗಳಿಗೆ ಬೆಂಗಳೂರಿನಲ್ಲಿ ಸ್ಥಳ ಕಾದಿರಿಸಲಾಗುವುದೇ?

ಇ) ಇಲ್ಲದಿದ್ದರೆ ಈ ರೀತಿ ಸ್ಥಳ ಕಾದಿರಿಸುವ ಸೌಕರ್ಯವನ್ನು ಬೆಂಗಳೂರಿನಲ್ಲಿ ಏರ್ಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಲಭ್ಯವಿರುವ ವಸತಿ ಸೌಕರ್ಯಗಳ ವಿವರ ಕೆಳಗೆ ಸೂಚಿಸಿರುವಂತೆ :

1)	ಕರ್ನಾಟಕ ಪ್ರವಾಸಿ ಸೌಧ	50 ಕೊಠಡಿಗಳು
2)	ಕರ್ನಾಟಕ ಕಲ್ಯಾಣ ಮಂಟಪ	24 ಕೊಠಡಿಗಳು
3)	ಕಾಟೇಜ್	37
4)	ಅತಥಿಗೃಹ	8 ಕೊಠಡಿಗಳು
5)	ನಿರೀಕ್ಷಣ ಭವನ	2 ಕೊಠಡಿಗಳು

ಆ) ಇಲ್ಲ. ದರ್ಶಾನಾರ್ಥಿಗಳು ತಿರುಮಲದಲ್ಲಿ ವಸತಿಗಾಗಿ ಕೋರಿದಲ್ಲಿ ಸ್ಥಳಾವಕಾಶ ಲಭ್ಯತೆಯ ಮೇರೆಗೆ ವಸತಿ ದೊರಕಿಸುವಂತೆ ವಿಶೇಷಾಧಿಕಾರಿಗಳಿಗೆ ತಿಳಿಸಲಾಗುವುದು.

ಇ) ವ್ಯವಹಾರಿಕ ದೃಷ್ಟಿಯಿಂದ ಸೂಕ್ತವೂ ಅಲ್ಲ ಮತ್ತು ಶಕ್ಯವೂ ಅಲ್ಲ.

ಅಣೆವಾರಿ ಪದ್ಧತಿ ಬಗ್ಗೆ

678 - ಶ್ರೀ ಎಂ.ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕರ್ನಾಟಕ ರಾಜ್ಯದಲ್ಲಿ ಅಣೆವಾರಿ ಮಾಡಲು ಅನುಸರಿಸುವ ಪದ್ಧತಿಗಳು ಯಾವುವು?

ಆ) ಸದರಿ ಪದ್ಧತಿಯಿಂದ ರೈತ ಸಮುದಾಯಕ್ಕೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ರೈತ ಸಮುದಾಯಕ್ಕೆ ತೊಂದರೆ ತಪ್ಪಿಸಲು ಅಣೆವಾರಿ ಪದ್ಧತಿ ಬಗ್ಗೆ ಸರಳೀಕರಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಬೆಳೆ ಕಟಾವು ಪ್ರಯೋಗಗಳ ಮೂಲಕ ಅಣೆವಾರಿ ನಿರ್ಧರಿಸಲಾಗುತ್ತಿದೆ.

ಆ) ಸದರಿ ಪದ್ಧತಿ ಅನುಸರಿಸುತ್ತಿರುವುದರಿಂದ ರೈತರ ಸಮುದಾಯಕ್ಕೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆ.

ಇ) ರೈತ ಸಮುದಾಯಕ್ಕೆ ಆಗುತ್ತಿರುವ ತೊಂದರೆ ತಪ್ಪಿಸಲು ಅಣೆವಾರಿ ಪದ್ಧತಿ ಸರಳೀಕರಣ ಗೊಳಿಸು ಪರಿಶೀಲಿಸಲಾಗುತ್ತಿದೆ.